ಆ)

ಹಳಿಯಾಳ ತಾಲ್ಲೂಕಿನಲ್ಲಿನ ಗ್ರಾಮಗಳು	ಮರಗಳ ಸಂಖ್ಯೆ
೧	೨
ಮಂಗಳವಾಡ	೨೮೦
ಪಾಳ	೧೬೦
ಹುಣಸವಾಡ್	೬೨೦
ಮದನಹಳ್ಳಿ	೨೦೦
ಅಗಸಲಕಟ್ಟಿ	೨೨೦
ಜಾವಳ್ಳಿ	೨೮೦
ಅಚಗಾಂವ್	೫೪೦
ಕಳಕೊಪ್ಪ	೨೦೦
ಮುರಕವಾಡ್	೩೦೦
ಒಟ್ಟು	೨೪೨೦

೩) ಅಧಿಕಾರಿ ವರ್ಗದವರು ಶಾಮೀಲಾಗಿಲ್ಲ. ಆದರೆ ಕರ್ತವ್ಯವನ್ನು ಸರಿಯಾಗಿ ಪಾಲಿಸದಿದ್ದಕ್ಕೆ ಸಂಬಂಧಿಸಿದ ವನಪಾಲಕ ಮತ್ತು ಗಾರ್ಡ್ ರವರ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಗಂಧದೆಣ್ಣೆ ಮತ್ತು ಗಂಧದ ಸಾಬೂನಂಗಳ ಮಾರಾಟದ ಕುರಿತು.

೧೫೪೫. ಶ್ರೀ ವೇದಾಂತ ಹೆಮ್ಮಿಗೆ(ಕೃಷ್ಣರಾಜ) — ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ತಯಾರಾಗುವ ಗಂಧದ ಎಣ್ಣೆ ಮತ್ತು ಗಂಧದ ಸಾಬೂನಂಗಳಿಗೆ ಭಾರತದ ಇತರ ಕಡೆಗಳಿಂದ ಹಾಗೂ ವಿದೇಶದಿಂದ ಕೊಳ್ಳಲು ಬಂದಿರುವ ಬೇಡಿಕೆಗಳ ಸಂಖ್ಯೆ ಎಷ್ಟು ?

ಆ) ಇದುವರೆವಿಗೆ ಇವುಗಳ ಮಾರಾಟದಿಂದ ಬಂದಿರುವ ಹಣದ ಮೊತ್ತವೆಷ್ಟು ಮತ್ತು ಸರಬರಾಜು ಮಾಡಿರುವ ಪ್ರಮಾಣವೆಷ್ಟು ?

ಇ) ಈ ಪದ್ಧತಿಗಳ ಮಾರಾಟಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಹಾಗೂ ಮಧ್ಯಮರ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ವಿವರ ಈ ಕೆಳಗಿನಂತಿದೆ.

	೮೫-೮೬	೮೬-೮೭	೮೭-೮೮
		(ಮೆಟ್ರಿಕ್ ಟನ್‌ಗಳಲ್ಲಿ)	
ಗಂಧದೆಣ್ಣೆ			
ವಿದೇಶಗಳಿಂದ	೨೩.೨	೧೮.೫	೧೦.೭
ಭಾರತದ ಇತರ ಕಡೆಗಳಿಂದ	೧ ೧೦	೬.೫	೩.೭
ಮೈಸೂರು ಗಂಧದ ಸಾಬೂನು			
ವಿದೇಶಗಳಿಂದ	೨೫.೦	೧೭.೦	೨೯.೦
ಭಾರತದ ಇತರ ಕಡೆಗಳಿಂದ	೨೮೧೪.೦೦	೨೫೫೩.೦೦	೨೨೯೪.೦೦

ಆ) ಮಾರಾಟದಿಂದ ಬಂದಿರುವ ಹಣದ ವಿವರ.—

	ಲಕ್ಷ ರೂ. ಗಳಲ್ಲಿ
ಗಂಧದೆಣ್ಣೆ	೧೫೮೩.೦೦
ಗಂಧದ ಸಾಬೂನು	೩೫೪೩.೫೯

ಸರಬರಾಜು ಮಾಡಿರುವ ಪ್ರಮಾಣ.—

	ಮೆಟ್ರಿಕ್ ಟನ್‌ಗಳಲ್ಲಿ
ಗಂಧದೆಣ್ಣೆ	೭೨.೬೦
ಗಂಧದ ಸಾಬೂನು	೬೬೫೩.೦೦

ಇ) ಕರ್ನಾಟಕ ಸಾಬೂನು ಮತ್ತು ವಾರ್ಜಕ ವಿಯಮಿತದ ಉತ್ಪನ್ನಗಳ ಮಾರಾಟಕ್ಕೆ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತವನ್ನು ವಿಶೇಷ ಮಾರಾಟದ ವಿಜಂಟರನ್ನಾಗಿ ನೇಮಿಸಲಾಗಿದೆ.

ಬೆಳಗೊಳ ಕೆಮಿಕಲ್ ಮತ್ತು ಫರ್ಟಿಲೈಜರ್ ಕಾರ್ಖಾನೆ ಬಗ್ಗೆ.

೧೩೦೬. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಜಾಮರಾಜ).—ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆಯ ಬೆಳಗೊಳ ಕೆಮಿಕಲ್ ಅಂಡ್ ಫರ್ಟಿಲೈಜರ್ಸ್ ಕಾರ್ಖಾನೆಯನ್ನು ಮೂಲತಃ ಸರ್ಕಾರದವರು ಅದರ ಅಗತ್ಯತೆಯನ್ನು ಗಮನಿಸಿ ಪ್ರಾರಂಭಿಸಿದ್ದಾಗ್ಯೂ ಕಾರಣಾಂತರದಿಂದ ಖಾಸಗಿಯವರ ಕೈ ಸೇರಿ ಅದು ರೋಗಗ್ರಸ್ಥ ಕೈಗಾರಿಕೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,